412 (554) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2005–06 ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು;

ಆ) ಪ್ರಸಕ್ತ ಸಾಲಿನಲ್ಲಿ ಎಷ್ಟು ಆದಾಯ ಬರಬೇಕಾಗಿತ್ತು (ವಿವರ ನೀಡುವುದು);

ಇ) ಅದರಂತೆ ಆದಾಯ ಬಂದಿದೆಯೇ ಬರದಿದ್ದಲ್ಲಿ ಕಡಿಮೆಯಾಗಿದ್ದ ಪಕ್ಷದಲ್ಲಿ ಅದಕ್ಕೆ ಕಾರಣಗಳೇನು; ವಿವರ ನೀಡುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯ ಮಂತ್ರಿಗಳು) :

ಅ) 2005–06ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ಸರ್ಕಾರಕ್ಕೆ ಬಂದ ಆದಾಯ ಒಟ್ಟು ರೂ. 3,414.94 ಕೋಟಿಗಳು.

ಆ) ಪ್ರಸಕ್ತ ಸಾಲಿನಲ್ಲಿ ಬರಬೇಕಾಗಿದ್ದ ಅಬಕಾರಿ ಆದಾಯ ರೂ. 3,347.72 ಕೋಟಿಗಳು (ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ)

ಇ) ಬಂದಿದೆ.

ಅನುಬಂಧ

2005–06ನೇ ಸಾಲಿನ ಆರ್ಥಿಕ ವರ್ಷದಲ್ಲಿನ ಆದಾಯದ ಆಯವ್ಯಯ ಅಂದಾಜು ಹಾಗೂ ವಿವಿಧ ಮೂಲಗಳಿಂದ ಬಂದ ಅಬಕಾರಿ ಆದಾಯದ ವಿವರಗಳು.

(ಕೋಟಿ ರೂ.ಗಳಲ್ಲಿ)

ಕ್ರ. ಸಂ.	ಮೂಲಗಳು	ಪರಿಷ್ಕೃತ ಗುರಿ	ಆದಾಯ ಸಂಗ್ರಹಣೆ
1	ಸಾರಾಯಿ	1578.57	1565.40
2	ಮದ್ಯ	1481.35	1425.45
3	ಬೀರ್	180.52	239.18
4	ದಂಡ ಮತ್ತು ಮುಟ್ಟುಗೋಲು	4.48	6.82
5	ಇತರೆ	102.80	178.09
	ಒಟ್ಟು	**3347.72**	**3414.94**

413 (658) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್): ಮಾನ್ಯ ಯೋಜನೆ, ಸಣ್ಣ ಉಳಿತಾಯ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲಾಟರಿ ಟಿಕೇಟ್‌ಗಳ ಮಾರಾಟದ ಬಗೆಗಿನ ಸರ್ಕಾರದ ನೀತಿ ಏನು;

ಆ) ರಾಜ್ಯದಲ್ಲಿ ಯಾವ ಯಾವ ರಾಜ್ಯದ ಲಾಟರಿ ಟಿಕೇಟ್‌ಗಳನ್ನು ರಾಜ್ಯದಲ್ಲಿ ಮಾರಾಟ ಮಾಡಲು ಅವಕಾಶವಿದೆ;

ಇ) ಲಾಟರಿ ಟಿಕೇಟುಗಳ ಮಾರಾಟದಿಂದ ರಾಜ್ಯದ ಬೊಕ್ಕಸಕ್ಕೆ ಬರುವ ಆದಾಯವೆಷ್ಟು? ವಿವರ ನೀಡುವುದು.

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಲಾಟರಿ ನಡೆಸುತ್ತಿರುವ ಎಲ್ಲಾ ರಾಜ್ಯಗಳು, ಈ ರಾಜ್ಯದಲ್ಲಿ ತಮ್ಮ ಲಾಟರಿ ಟಿಕೇಟುಗಳನ್ನು ಮಾರಾಟಮಾಡಬಹುದಾಗಿದೆ.

ಆ) ರಾಜ್ಯ ಸರ್ಕಾರವು ತನ್ನ ರಾಜ್ಯದ ಪೇಪರ್ ಲಾಟರಿಗಳನ್ನು ನಡೆಸುತ್ತಿರುವುದರಿಂದ ಲಾಟರಿ (ರೆಗ್ಯುಲೇಷನ್)ಆಕ್ಟ್ 98ರ ಪ್ರಕಾರ ಯಾವುದೇ ಹೊರ ರಾಜ್ಯ ತನ್ನ ರಾಜ್ಯದ ಲಾಟರಿ ಟಿಕೇಟುಗಳನ್ನು ಕರ್ನಾಟಕ ರಾಜ್ಯದಲ್ಲಿ ಮಾರಾಟ ಮಾಡಲು ಅವಕಾಶವಿದೆ.

ಇ)

ವರ್ಷ	ಲಾಟರಿ ಟಿಕೇಟುಗಳ ಮಾರಾಟದಿಂದ (ರೂ. ಕೋಟಿಗಳಲ್ಲಿ)	ಲಾಟರಿ ಮೇಲಿನ ಕರದಿಂದ (ರೂ. ಕೋಟಿಗಳಲ್ಲಿ)	ಒಟ್ಟು (ರೂ. ಕೋಟಿಗಳಲ್ಲಿ)
2004–05	ರೂ. 90–00	ರೂ. 76.03	ರೂ. 166–03
2005–06	ರೂ. 90–00	ರೂ. 75–83	ರೂ. 165–83
		ಒಟ್ಟು:	**ರೂ. 331–86**

414 (659) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್. ಮತಕ್ಷೇತ್ರ ವ್ಯಾಪ್ತಿಯಲ್ಲಿ ವಾಸಿಸುವ ಯಾವ ಯಾವ ಜನಾಂಗದವರಿಗೆ ಎಷ್ಟೆಷ್ಟು ಜಾಗವನ್ನು ಸರ್ಕಾರ ಮಂಜೂರು ಮಾಡಿದೆ. (ವ್ಯಾಪ್ತಿವಾರು, ದಿನಾಂಕವಾರು ಹಾಗೂ ವಿಸ್ತೀರ್ಣವಾರು ಮಾಹಿತಿಯನ್ನು ನೀಡುವುದು);

ಆ) ಸರ್ಕಾರ ಮಂಜೂರು ಮಾಡಿದ ಭೂವಿಯನ್ನು ಸರ್ವೆ ಮಾಡಿಸಿ ಹಂಚಿಕೆದಾರರಿಗೆ ವಿತರಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಎಲ್ಲಾ ಹಂಚಿಕೆದಾರರು ತಮಗೆ ಹಂಚಿಕೆಯಾದ ಜಾಗವನ್ನು ಅನುಭೋಗಿಸುತ್ತಿದ್ದಾರೆಯೇ?